ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 773
ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
ಉತ್ತರಿಸುವ ದಿನಾಂಕ : 17.09.2021.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಗಳಲ್ಲಿ ಹೊರಮೂಲ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರು ನಿಗಮದ ಲಕ್ಷಾಂತರ ಹಣವನ್ನು ದುರುಪಯೋಗ ಪಡಿಸಿಕೊಂಡು ತನ್ನ ಸ್ವಂತ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು),	ಹೌದು. ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೀದರ್ ಜಿಲ್ಲೆಯಲ್ಲಿ 2019ನೇ ಸಾಲಿನಲ್ಲಿ ಹೊರಮೂಲ ಆಧಾರದಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಶ್ರೀ.ಉದಯಕುಮಾರ ನಾಯಕ. ಸಾ:ಖಾನಾಪುರ. ಬಾಲ್ಕಿ ತಾ., ಹಾಗೂ ಶ್ರೀ.ಸುರೇಶ ಬಿನ್ ಜ್ಞಾನೇಶ್ವರ. ಸಾ:ಎಣಕೂರ. ಬಾಲ್ಕಿ. ಇವರುಗಳು ನಿಗಮದ ರೂ.23.50ಲಕ್ಷಗಳನ್ನು ತಮ್ಮ ಸ್ವಂತ ಖಾತೆಗೆ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ನ್ಯೂ ಟೌನ್ ಪೋಲಿಸ್ ಠಾಣೆ, ಬೀದರ್ ಟೌನ್ ಸರ್ಕಲ್‌ನಲ್ಲಿ ಅಪರಾಧ ಸಂಖ್ಯೆ:0013/2019. ದಿನಾಂಕ:17.01.2019 ರಂದು ಎಫ್.ಐ.ಆರ್‌ನ್ನು ದಾಖಲು ಮಾಡಲಾಗಿದೆ ಹಾಗೂ ಅವರಿಂದ ಹಣ Recovery ಮಾಡಲಾಗಿದೆ.
ಆ)	ಹಾಗಿದ್ದಲ್ಲಿ, ಇಂತಹ ಸಿಬ್ಬಂದಿಗಳನ್ನು ಮತ್ತೊಂದು ನಿಗಮದಲ್ಲಿ ಪುನರ್ (ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನೇಮಕ ಮಾಡಿಕೊಂಡಿರುವುದು ನಿಜವಲ್ಲವೇ; ಇಂತಹ ಸಿಬ್ಬಂದಿಗಳನ್ನು ಎಷ್ಟು ಕಾಲಮಿತಿಯೊಳಗೆ ನಿಗಮದಿಂದ ಹಿಂತಿರುಗಿಸಲಾಗುವುದು;	ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಮಾಹಿತಿ ಕೊರತೆಯಿಂದ ಪುನರ್ ನೇಮಕಗೊಂಡಿದ್ದ ಇಂತಹ ಸಿಬ್ಬಂದಿಯ ಸೇವೆಯನ್ನು ಈಗಾಗಲೇ ನಿಗಮದಿಂದ ತೆಗೆದುಹಾಕಲಾಗಿರುತ್ತದೆ.
ಇ)	ಇಂತಹ ಸಿಬ್ಬಂದಿಗಳ ಮೇಲೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ ಸಹ ಸದರಿ ಸಿಬ್ಬಂದಿಗಳನ್ನು ಪುನ: ಮುಂದುವರೆಸಲು ಕಾರಣಗಳೇನು? (ಸಂಪೂರ್ಣ ಮಾಹಿತಿ ನೀಡುವುದು).	

ಸಂಖ್ಯೆ: ಸಕಇ 434 ಎಸ್‌ಡಿಸಿ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.